ಎಂಬುದು ಅವರ ಮನಸ್ಸಿಗೆ ಬಂದಿತ್ತು.

‘ಇಲ್ಲ, ಇಲ್ಲೇ ಎಲ್ಲಾದರೂ ಜನಶೂನ್ಯ ಎಸ್ಟೇಟು ಬಂಗ್ಲಾದಲ್ಲಿ ಕೆಲದಿನ ಇರೋಣವೆಂಬ ಬಯಕೆ ನನ್ನದು. ಯಾವುದಾದರೂ ಪ್ರಶಾಂತ ರೆಸಾರ್ಟ್ ಆದರೂ ಸರಿಯೆ’ ಎಂದರು ಪ್ರೊ. ಭಾಸ್ಕರ್.

‘ಹಾಗಾದರೆ ಪ್ಲಾಂಟರ್ ಸೋಮಣ್ಣನವರ ಭೂತ ಬಂಗ್ಲೆಯಿದೆಯಲ್ಲ! ಅಲ್ಲೇ ಇದ್ದರಾಯಿತು. ಹೇಗೂ ರಾತ್ರಿ ಹೊತ್ತು ಅಲ್ಲಿ ಯಾರೂ ಇರೋದಿಲ್ಲ. ಹೇಳಿ ಕೇಳಿ ವಿಜ್ಞಾನಿಗಳು. ಭೂತ ಗೀತ ಯಾವುದೂ ಹತ್ತಿರ ಸುಳೀಲಿಕ್ಕಿಲ್ಲ’ – ಡಾ. ಗಣೇಶ್ ದೊಡ್ಡದೊಂದು ಜೋಕನ್ನು ಹೇಳಿದವರಂತೆ ತಾನೇ ಜೋರಾಗಿ ನಕ್ಕರು. ಆ ಮಾತನ್ನು ಚಂದ್ರಪ್ಪನವರು ಅಲ್ಲಗಳೆಯಲಿಲ್ಲವಾದರೂ ‘ಹಾಗೆ ಬೇಕಿದ್ದರೆ ಪ್ಲಾಂಟರ್ ಸೋಮಣ್ಣನವರ ಗೆಸ್ಟ್ ಹೌಸ್ ಇದೆಯಲ್ಲ, ಅಲ್ಲೇ ಇದ್ದರಾಯಿತು. ಅವರಂತೂ ಬಹಳ ಸಂತೋಷಪಡುತ್ತಾರೆ’ ಅಂದರು.

‘ಅದಕ್ಕೆ ಯಾರಾದರೂ ಹನಿಮೂನ್ ಅಂತಾರ? ಈ ಮನೆಯಿಂದ ಆ ಮನೆಗೆ ಬಂದು ಇರೋದಕ್ಕೆ. ಹಾಗೆ ಬೇಕಿದ್ದರೆ ಚಿಕ್ಕಮಗಳೂರಿನ ನನ್ನ ಎಸ್ಟೇಟ್ ಮನೆ ಖಾಲಿ ಇದೆಯಲ್ಲ; ಅಲ್ಲೇ ಹೋಗಿ ಇದ್ದು ಬಿಡಿ. ಅಡುಗೆಗೆ, ಗುಡಿಸಿ ಒರೆಸುವುದಕ್ಕೆ ಜನ ಇದ್ದಾರೆ. ಅದೆಲ್ಲ ನನಗೆ ಬಿಡಿ’ ಅಂದರು ಡಾ. ಗಣೇಶ್. ಪ್ರೊ. ಭಾಸ್ಕರ್‌ಗೆ ಆ ಸಲಹೆ ತುಂಬ ಹಿಡಿಸಿತು.

ಪ್ಲಾಂಟರ್ ಸೋಮಣ್ಣನವರ ಗೆಸ್ಟ್ ಹೌಸೇನೋ ಚೆನ್ನಾಗಿದೆ. ಆದರೆ ಅದರ ಒಂದೆರಡು ಕೋಣೆಗಳಲ್ಲಾದರೂ ಅವರ ಇತರ ಅತಿಥಿಗಳು ಇದ್ದೇ ಇರ್‍ತಾರೆ. ಕತೆ, ಕಾದಂಬರಿ ಬರಿಯೋರಂತೂ ಅಲ್ಲಿ ತಿಂಗಳಾನುಗಟ್ಟಲೆ ಇದ್ದುಬಿಡ್ತಾರೆ. ರೆಸಾರ್ಟಾದರೂ ಅಷ್ಟೆ. ವಾರಾಂತ್ಯದಲ್ಲಂತೂ ಜನನಿಬಿಡ. ಚಿಕ್ಕಮಗಳೂರಿಗೇ ಹೋಗೋಣ ಅಂದುಕೊಂಡರು.

ಮಾರನೆಯ ದಿನವೇ ಚಿಕಮಗಳೂರಿನ ಎಸ್ಟೇಟ್‌ಗೆ ಪ್ರೊ. ಭಾಸ್ಕರ್, ಶೀಲಾ ಹೊರಟರು. ಕೊಡವೂರಿನ ಗೂಡಂಗಡಿಯಿಂದ ಸಾಕಷ್ಟು ಚಾರ್‌ಮಿನಾರ್ ಸಿಗರೇಟನ್ನೂ ಕಟ್ಟಿಸಿಕೊಂಡರು. ದೀಪೂಗೆ ಅವರಿಬ್ಬರನ್ನೂ ಜೊತೆಯಾಗಿ ನೋಡಿ ಆಶ್ಚರ್ಯ! ಇದು ನಮ್ಮ ಪ್ಲಾಂಟರ್ ಚಂದ್ರಪ್ಪ ದನಿಯೋರ ಮಗಳಲ್ಲವಾ? ಎಂದುಕೊಂಡು ಪ್ರೊ. ಭಾಸ್ಕರ್‌ಗೆ ಕೊಡಬೇಕಾಗಿದ್ದ ಚಿಲ್ಲರೆಯನ್ನು ಕೈಯಲ್ಲೇ ಉಳಿಸಿ ತಟಸ್ಥವಾಗಿ ನಿಂತಿರಬೇಕಾದರೆ ಅವರ ಕಾರು ರೊಯ್ಯನೆ ಹೊರಟು ಹೋಯಿತು.

ಸುಂದರ ಪ್ರಕೃತಿ ಪರಿಸರದ ಎಸ್ಟೇಟ್. ಡಾ. ಗಣೇಶ್ ಅಲ್ಲಿ ಇರಲಿಲ್ಲವಾದರೂ ಎಸ್ಟೇಟ್ ಮನೆ ಆಗ ತಾನೇ ತೊಳೆದಿಟ್ಟಂತೆ ಇತ್ತು. ಒಂದೆಡೆ ಸೊಂಪಾಗಿ ಬೆಳೆದು ನಿಂತು ಸೋನೆಮಳೆಯಲ್ಲಿ ಮಿಂದು ಅದಾಗ ಅರಳಿನಿಂತ ಮಲ್ಲಿಗೆಯೋಪಾದಿಯಲ್ಲಿ ಬೆಳ್ಳನೆ ಪರಿಮಳಿಸುತ್ತ ರಾರಾಜಿಸುತ್ತಿರುವ ಕಾಫಿ ಹೂ, ಇನ್ನೊಂದೆಡೆ ಹೊಟ್ಟೆಯನ್ನೇ ಸೀಳಿ ಅಮೃತವನ್ನು ಸುರಿಸುವ ರಬ್ಬರ್ ಎಸ್ಟೇಟ್. ಮಧ್ಯೆ ಎತ್ತರದಲ್ಲೊಂದು ಸುಂದರವಾದ ಮನೆ.

(ಸಶೇಷ)

# ಪ್ರತಿಕ್ರಿಯೆ




## ಕಣ್ಣೀರು ತರಿಸಿದ ಬುದ್ಧಕಥನ

‘ಬುದ್ಧಯಾನ’ (ಕಂನಾಡಿಗಾ ನಾರಾಯಣ) ಧಾರಾವಾಹಿಯನ್ನು ಓದಲು ನನಗೆ ತುಂಬ ಕುತೂಹಲವಿತ್ತು. ಬುದ್ಧ ಐತಿಹಾಸಿಕ ವ್ಯಕ್ತಿ ಮತ್ತು ಬೌದ್ಧ ಧರ್ಮದ ಮೂಲ ಪ್ರವರ್ತಕ. ಅಂತಹ ವ್ಯಕ್ತಿಯ ಜೀವನದ ವಿವಿಧ ಮಜಲುಗಳ ಬಗ್ಗೆ, ಹುಟ್ಟಿನಿಂದ ಅಂತ್ಯದವರೆಗಿನ, ಸಿದ್ಧಾರ್ಥ ಬುದ್ಧನಾಗುವ ಜೀವನಯಾನದ ಕಥಾನಕವನ್ನು ಲೇಖಕರು ಸೊಗಸಾಗಿ ಹೇಳಿದ್ದಾರೆ. ವಿವಿಧ ಮುಖ್ಯ ಪಾತ್ರಗಳ ಮೂಲಕ ಕಥೆ ಹೇಳುತ್ತಾ ಹೋಗುವ, ಆ ಮೂಲಕ ಬುದ್ಧನ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತಾ ಸಾಗುವ ಕಥಾತಂತ್ರ ಸೂಕ್ತವಾಗಿದೆ. ಕೆಲವು ಕಂತುಗಳನ್ನು ಓದುವಾಗಲಂತೂ ಕಣ್ಣೀರು ತಡೆಯಲಾಗಲಿಲ್ಲ. ಸರಳವಾದ ಭಾಷೆಯಲ್ಲಿ ಮನಮುಟ್ಟುವಂತೆ ಬರೆಯುವ ಕಲೆ ಲೇಖಕರಿಗೆ ಸಿದ್ಧಿಸಿದೆ. ಇಂತಹ ಕಾದಂಬರಿ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

–ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

## ಬುದ್ಧನ ಕಾಲದಲ್ಲಿ ಸೂಪು ಪದವಿತ್ತೆ?

ಒಂಬತ್ತು ಕಂತುಗಳಲ್ಲಿ ಮೂಡಿಬಂದ ಧಾರಾವಾಹಿ ತನ್ನ ನಿರೂಪಣಾ ತಂತ್ರ, ವಾಸ್ತವತೆಯಿಂದ ಹೆಣೆದ ಕಥಾಹಂದರ ಹಾಗೂ ಸರಳ ಭಾಷೆಯಿಂದ ಮನಮುಟ್ಟಿತು. ಕೊನೆಯ ಕಂತಿನಲ್ಲಿ ಬುದ್ಧನಿಗೆ ಬಡಿಸಿದ ಭಕ್ಷ್ಯಕ್ಕೆ ಅಣಬೆಯ ‘ಸೂಪು’ ಎಂಬ ಪದ ಎರಡು ಸಲ ಬಳಸಿದ್ದಾರೆ. ಸೂಪು – ಇದು ಆಂಗ್ಲ ಪದವಲ್ಲವೆ? ಬುದ್ಧನ ಕಾಲದಲ್ಲಿ ಈ ಪದ ಬಳಕೆಯಲ್ಲಿತ್ತೆ?

–ಆರ್.ಟಿ. ಶರಣ್, ಕಲಬುರಗಿ

## ಬುದ್ಧಮಾರ್ಗ ಅಗತ್ಯ

‘ಹುಟ್ಟಿದೆಲ್ಲವೂ ಸಾಯಲೇಬೇಕು’ ಎಂಬ ಬುದ್ಧನ ಸಂದೇಶ ಅಕ್ಷರಶಃ ಸತ್ಯ. ಬುದ್ಧನ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ದೇಶ ಮತ್ತು ರಾಜ್ಯ ಸುಭಿಕ್ಷವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

–ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

## ವಿಶೇಷ ಅನುಭವದ ಯಾನ

ಆಗಿನ ರಾಜಕೀಯ ಸನ್ನಿವೇಶಗಳು, ಮತ್ಸರದ ಮನಸ್ಸುಗಳು, ಸತ್ಯದ ಸಾಕ್ಷಾತ್ಕಾರಕ್ಕಾಗಿ ಸವೆಸಿದ ಹೆಜ್ಜೆಗಳು, ಮಾನವೀಯತೆಯ ಸಂದರ್ಭಗಳು – ಎಲ್ಲವನ್ನೂ ಒಳಗೊಂಡಿದ್ದ ‘ಬುದ್ಧಯಾನ’ ವಿಶೇಷ ಅನುಭವ ತಂದಿತು. ಮಾಯಾದೇವಿಯಿಂದ ಆನಂದನವರೆಗೆ, ಆಮ್ರಪಾಲಿಯಿಂದ ಅಂಗುಲಿಮಾಲನವರೆಗೆ ಪ್ರತಿಯೊಂದೂ ಪಾತ್ರಗಳು ಗಮನಸೆಳೆದವು. ಬೌದ್ಧ ಧರ್ಮದ ವಿಧಿನಿಷೇಧಗಳ ಬಗ್ಗೆ ಹಲವು ಮಾಹಿತಿ ತಿಳಿದಂತಾಯಿತು.

–ವೆಂಕಟೇಶ್ ದಾವಣಗೆರೆ

## ವಿಶಿಷ್ಟ ಪರಿಚಯ

ಧಾರಾವಾಹಿ ತುಂಬ ಚೆನ್ನಾಗಿತ್ತು. ಒಂಬತ್ತು ಸಂಚಿಕೆಯಲ್ಲಿ ಹಲವು ವಿಚಾರಗಳಿದ್ದವು. ಆನಂದನ ಪರಿಚಯ ವಿಶಿಷ್ಟವಾಗಿತ್ತು.

–ರಾಮನಾಥ್ ಕೆ.ಎಲ್.

## ದುಃಖ ತಂದ ಪರಿನಿರ್ವಾಣ

‘ಆಸೆಯೇ ದುಃಖದ ಮೂಲ’ ಎಂದು ಗೌತಮ ಬುದ್ಧ, ಸಕಲ ಸಂಪತ್ತನ್ನು ತ್ಯಜಿಸಿ ಭೇದಭಾವ ಇಲ್ಲದೆ ಬುದ್ಧ ಮಾರ್ಗವನ್ನು ಬಂದವರಿಗೆಲ್ಲ ಬೋಧಿಸಿ ಧ್ಯಾನಾಸಕ್ತನಾಗಿದ್ದಂತೆ ಪರಿನಿರ್ವಾಣ ಹೊಂದಿದ್ದು ದುಃಖ ಭರಿಸುವಂತಿತ್ತು.

–ರುದ್ರಮೂರ್ತಿ ಲಿಂಗದಹಳ್ಳಿ

## ಆತುರದ ಮುಕ್ತಾಯ ಯಾಕೆ?

ಧಾರಾವಾಹಿಯ ಕೊನೆಯ ಸಂಚಿಕೆಯೆಂಬ ಅರಿವೇ ಇಲ್ಲದೆ ಓದಲು ಶುರು ಮಾಡಿದ ನನಗೆ ಮುಕ್ತಾಯದ ಸಾರ ನೋಡಿ ಬೇಸರವಾಯಿತು. ಆ ಮಹಾಯಾನವನ್ನು ಇಷ್ಟೊಂದು ಬೇಗ ಮುಗಿಸುವ ಆತುರವಾದರೂ ಏನಿತ್ತು?

–ಮಹದೇವಸ್ವಾಮಿ

## ಮತ್ತೆ ಮತ್ತೆ ಓದಬೇಕೆನಿಸಿತು

ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ಕಥೆಗೆ ಪೂರಕವಾದ ಮೋನಪ್ಪನವರ ಚಿತ್ರಕಲೆ ಅದ್ಭುತ. ತಿಳಿದಿರುವ ಕಥೆಯಾದರೂ ಭಾವ ನವನವೀನವಾಗಿದೆ. ಎಷ್ಟು ಬಾರಿ ಕೇಳಿದರೂ ಮತ್ತೊಮ್ಮೆ ಕೇಳಬೇಕೆನಿಸುವ ಬುದ್ಧನ ಕಥೆ ಧಾರಾವಾಹಿ ರೂಪದಲ್ಲಿ ಅತ್ಯಂತ ಆಸಕ್ತಿದಾಯಕವಾಗಿತ್ತು.

–ಧನಲಕ್ಷ್ಮಿ ರಾವ್, ಕೋಲಾರ

## ಬಹುಕಾಲ ಮನದಲ್ಲಿ...

‘ಜಗವೆಲ್ಲ ಮಲಗಿರಲು ಬುದ್ಧನೊಬ್ಬ ಎದ್ದ’ ಎಂಬ ಮಾತು ಇದೆ. ಅರಮನೆಯ ಎಲ್ಲಾ ಸುಖ ಲೋಲುಪತೆಯನ್ನು ತ್ಯಜಿಸಿ, ಜ್ಞಾನೋದಯ ಪಡೆದು ಗೌತಮ ಬುದ್ಧ ಎನಿಸಿಕೊಂಡ ಬೌದ್ಧ ಧರ್ಮ ಸಂಸ್ಥಾಪಕ ಗೌತಮ ಬುದ್ಧನ ‘ಬುದ್ಧಯಾನ’ ಧಾರಾವಾಹಿ ಬಹುಕಾಲ ಮನದಲ್ಲಿ ಉಳಿಯುವುದು. ಲೇಖಕರಿಗೆ ಅಭಿನಂದನೆಗಳು.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ